<u>ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿಸಿ ನಂಬ್ರಃ 1025 /2023
ಡಿ ಡಬ್ಲ್ಯೂ- 01

ದಿನಾಂಕಃ **07-01-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

<u>ಮುಂದುವರಿದ ಮುಖ್ಯ ವಿಚಾರಣೆಃಶ್ರೀ ಬಿ.ಆರ್.ಎನ್. ವಕೀಲರಿಂದಃ</u>

1. 2008 ಮೇ ನನ್ನ ಮಾಜಿ ಹೆಂಡತಿ ದಿಪಾ ಪಟ್ವಾಲ್ ರವರು ನನಗೆ ಮತ್ತೊಂದು ಹುಡುಗನ ಜೊತೆ ಸಂಬಂಧ ಇರುವುದು ಎಂದು ಹೇಳಿ ನನಗೆ ಡಿವೋರ್ಸ್ ಬೇಕು ಎಂದು ಹೇಳಿದ ನಂತರ ನಾನು ಅವರ ತಾಯಿ ಶ್ರೀಮತಿ ಸರೋಜ ಪಟ್ವಾಲ್ ರವರಿಗೆ ಈ ವಿಚಾರವನ್ನು ಹೇಳಿರುತ್ತೇನೆ. ಆ ದಿನದ ನಂತರ ಯಾವುದೇ ರೀತಿಯ ಸಂಪರ್ಕ ನನಗೆ ಹಾಗೂ ಪಿರ್ಯಾದಿಗೆ ಇರುವುದಿಲ್ಲ. ಅವರು ದೂರು ಸಲ್ಲಿಸಿದ ಸಮಯದಲ್ಲಿ ನನಗೆ ಯಾವುದೇ ರೀತಿಯ ಹಣದ ಅವಶ್ಯಕತೆ ಇರಲಿಲ್ಲ. ಯಾವುದೇ ರೀತಿಯ ಹಣವನ್ನು ನಾನು ಅವರಿಂದ ತೆಗೆದುಕೊಂಡಿರುವುದಿಲ್ಲ.

2. 2008 ರಲ್ಲಿ ಕೊಲಂಬಿಯ ಎಶಿಯಾದಲ್ಲಿ ಕೆಲಸ ಮಾಡುತ್ತಿದ್ದು ಅದಕ್ಕೆ ಸಂಬಂಧಪಟ್ಟ ಐಟಿ ರಿಟರ್ನ್ ದಾಖಲೆಗಳನ್ನು ಹಾಜರು ಪಡಿಸುತ್ತಿದ್ದೇನೆ. ಸಾಕ್ಷಿ 2011-2012, 2012-2013, 2014-2015, 2015-2016, 2022-2023, 2024-2025, 2025-2016 ರ ಐಟಿ ರಿಟರ್ನ್ ಫಾರಂ ಹಾಜರು ಪಡಿಸುತ್ತಿದ್ದು ಅದನ್ನು ನಿ.ಡಿ. **6** ರಿಂದ ನಿ.ಡಿ. **12** ಎಂದು ಗುರುತಿಸಲಾಯಿತು. ಸದರಿ ಪ್ರಕರಣ ಸುಳ್ಳಾಗಿರುವುದರಿಂದ ಪ್ರಕರಣವನ್ನು ವಜಾಗೊಳಿಸಬೇಕೆಂದು ವಿನಂತಿಸುತ್ತೇನೆ.

<u>ದೂರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು , ಕೋರಿಕೆ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.</u>

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ